ಓ ಎಸ ನಂ.53/2022
ಪಿ.ಡಬ್ಲ್ಯೂ-1 ಲಕ್ಷ್ಮೀ ತಂದೆ ಅಶೋಕ ಗೋಳಸಾರ

**(ಇಂದು ದಿನಾಂಕಃ 22-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಎಸ್ ಪಿ ವಕೀಲರಿಂದ.

ಗುರಲಿಂಗಪ್ಪ ನನ್ನ ಅಜ್ಜ ಆಗಿರುತ್ತಾರೆ. ಗುರಲಿಂಗಪ್ಪರವರು ನಾನು ಹುಟ್ಟುವ ಮೊದಲು ಮೃತರಾಗಿರುತ್ತಾರೆ. ರತ್ನಾಬಾಯಿ ನನ್ನ ಅಜ್ಜಿಯಾಗಿದ್ದು ಅವರು ಜೀವಿತಾ ಇರುತ್ತಾರೆ. ಗುರುಲಿಂಗಪ್ಪರವರಿಗೆ ಒಟ್ಟು 6 ಜನ ಮಕ್ಕಳು ಇರುತ್ತಾರೆ. ನಮ್ಮ ತಂದೆ ಅವರ ಹಿರಿಯರ ಮಗ ಎಂದರೆ ಸರಿ. ನಮ್ಮ ತಂದೆಯವರು ಮೃತರಾಗಿ ಈಗ 3 ವರ್ಷ ಮುಗಿದಿರುತ್ತವೆ. ನಮ್ಮ ತಂದೆ ಖಾಸಗಿ ಕಂಪನಿಯಲ್ಲಿ ನೌಕರಿ ಮಾಡುತ್ತಿದ್ದರು. ನಮ್ಮ ಮನೆಯ ಜವಾಬ್ದಾರಿ ಎಲ್ಲರೂ ಸೇರಿ ನೋಡಿಕೊಳ್ಳುತ್ತಿದ್ದರು. ನಾವೆಲ್ಲ ಈಗ ಬೇರೆಯಾಗಿದ್ದೇವೆ ಎಂದರೆ ಸರಿ. ನಾನು ಹುಟ್ಟುವ ಪೂರ್ವದಲ್ಲಿಯೇ ಬೇರೆ-ಬೇರೆ ಮನೆ ಮಾಡಿಕೊಂಡು ನಾವು ವಾಸವಾಗಿರುತ್ತೇವೆ. ನಮ್ಮ ತಂದೆ ಅಫಜಲಪೂರ ಸಿವಿಲ್ ನ್ಯಾಯಾಲಯದಲ್ಲಿ ಪಾಲು ಕೋರಿ ಓ ಎಸ್ ನಂ.38/2016 ಎಂಬ ದಾವೆ ಹಾಕಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಮ್ಮ ತಂದೆ ವಿಭಾಗ ಮಾಡಿ ಪಾಲು ನೀಡಬೇಕು ಎಂದು ಕೇಳಿದ್ದರು. ನಮ್ಮ ಅಜ್ಜ ದಿನಾಂಕ 25-09-1996 ರಂದು ವಿಭಾಗ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಗೆ ಸದರಿ ವಿಭಾಗದಲ್ಲಿ ಸರ್ವೆ ನಂ.377/2 ರಲ್ಲಿ 7 ಎಕರೆ ಜಮೀನು ಪಾಲಿಗೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸರ್ವೆ ನಂ.377/6 ರಲ್ಲಿ 10 ಎಕರೆ 16 ಗುಂಟೆ ಜಮೀನನ್ನು ನಮ್ಮ ಕಾಕ 3 ನೇ ಪ್ರತಿವಾದಿ ವಿಶ್ವರವರಿಗೆ ನೀಡಿದ್ದರು ಎಂದರೆ ಸರಿ. ಸರ್ವೆ ನಂ.136 ರಲ್ಲಿ 10 ಎಕರೆ 15 ಗುಂಟೆ ಜಮೀನನ್ನು 2 ನೇ

ಪ್ರತಿವಾದಿಯಾದ ನಮ್ಮ ಕಾಕ ಬಿಂದುಸಾರರವರಿಗೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸರ್ವೆ ನಂ.136 ರಲ್ಲಿ 1 ಎಕರೆ 2 ಗುಂಟೆ ಮತ್ತು ಸರ್ವೆ ನಂ.377/2 ರಲ್ಲಿ ಹೊಸ ನಂ.377/6 ರಲ್ಲಿ 5 ನೇ ಪ್ರತಿವಾದಿಯಾದ ಮಲ್ಲಿಕಾರ್ಜುನವರಿಗೆ ಪಾಲು ನೀಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.377/6 ರಲ್ಲಿ 8 ಎಕರೆ 2 ಗುಂಟೆ ಜಮೀನು ನಮ್ಮ ಅಜ್ಜ ತೀರಿಕೊಂಡಾಗಿನಿಂದ ನಮ್ಮ ಅಜ್ಜಿ ರತ್ನಾಬಾಯಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಇರಬಹುದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

2. ನಮ್ಮ ತಂದೆಯವರು ತೀರಿದ ನಂತರ ಅವರು ಹಾಕಿದ ಕೇಸನ್ನು ನಾವು ನಡೆಸಿಕೊಂಡು ಹೋಗಿದ್ದೇವು ಎಂದರೆ ಸರಿಯಲ್ಲ. ಸಾಕ್ಷಿ ನಾವು ಅದರಲ್ಲಿ ಹಾಜರಾಗಿಲ್ಲ, ಅದು ವಜಾಗೊಂಡಿರುತ್ತದೆ ಎನ್ನುತ್ತಾರೆ. ನಮ್ಮ ತಂದೆಯವರು ಯಾವ ವಕೀಲರ ಮೂಲಕ ಕೇಸು ಹಾಕಿದ್ದರು ಎಂದು ಹೆಸರು ಹೇಳಲು ನೆನಪಿಲ್ಲ. ಸರ್ವೆ ನಂ.377/6 ರಲ್ಲಿ 1 ಎಕರೆ 32 ಗುಂಟೆ ಜಮೀನು ಕೆನಾಲಗಾಗಿ ಭೂಸ್ವಾಧೀನ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಪರಿಹಾರದ ಹಣದ ಕುರಿತು ಪ್ರವೀಣ ಗುತ್ತೇದಾರರವರ ಹತ್ತಿರ ರಾಜಿ ಸಂಧಾನ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿ ಅಲ್ಲಿಗೆ ಹೋಗಿದ್ದೇವು ಎನ್ನುತ್ತಾರೆ. ಸದರಿ ರಾಜಿ ಸಂಧಾನದಂತೆ ನಾವು ಓ ಎಸ್ ನಂ.38/2016 ರನ್ನು ರಾಜಿಯಾಗಿರುತ್ತದೆ ಎಂದು ತಿಳಿಸಿ, ದಾವೆ ವಜಾ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಾಯಿ ನಮ್ಮ ಅಜ್ಜಿ ಮತ್ತು ಕಾಕರವರ ಮೇಲೆ ಕ್ರಿಮಿನಲ್ ಕೇಸುಗಳನ್ನು ಕೂಡಾ ಮಾಡಿದ್ದರು ಎಂದರೆ ಸರಿ. ಸದರಿ ಕೇಸುಗಳನ್ನು ಕೂಡಾ ನಾವು ರಾಜಿ ಮಾಡಿಕೊಂಡು ಮುಗಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.